Regd No B G 155 15-1-1970

SATYAVADI Daily, MYSORE 4 ✱ 53 rd Year of Publication

ನ ಣ ್ಣ
ಮಹೋತ್ಸವ
ನೆರವೇರಿಸಿದ
ಪತ್ರಿಕೆ

ಸತ್ಯವಾದಿ

Golden
Jubilee
Celebrated
Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

✱ ಮಂತ್ರಿಗಳೆಲ್ಲ ದೆಹಲಿಯಲ್ಲಿರುವಂತೆ ಪ್ರಧಾನರ ಕರೆ ✱

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ,
ಓಲ್ಡ್ ಬ್ಯಾಂಕ್ ರೋಡ್,
ಮೈಸೂರು.

ಬಾಹುಸಾರ್ ಕಂಪೆನಿ,
ಸೂರಡಿ ರಸ್ತೆ,
ಮೈಸೂರು-4.

ಮಹಾತ್ಮಾ ಗಾಂಧಿ ಸ್ಮಾರಕ ಶಾಂತಿ ಸಮಾರಂಭ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಮೈಸೂರು ರಂಗಾಚಾರ್ಲು ಪುರಭವನದಲ್ಲಿ ಭಾನುವಾರ ಸಂಜೆ 23 ನೇ ಮಹಾತ್ಮಾ ಗಾಂಧಿ ಸ್ಮಾರಕ ಶಾಂತಿ ಸಮಾರಂಭದ ಆರಂಭೋತ್ಸವವನ್ನು ರಾಜ್ಯಪಾಲರಾದ ಶ್ರೀ ಧರ್ಮವೀರರು ನೆರವೇರಿಸಿದರು.

ಸಮಾರಂಭ ಯಶಸ್ವಿ ಆಗಿ ನೆರವೇರಿತು.

ಸಂಘದ ಅಧ್ಯಕ್ಷರಾದ ಶ್ರೀ ಹೆಚ್. ಕೆಂಪೇಗೌಡರು ಸ್ವಾಗತ ಬಯಸಿದರು.

ಶ್ರೀ ಟಿ. ತಿಮ್ಮಪ್ಪನವರು ವರದಿ ಒಪ್ಪಿಸಿದರು.

ಗಾನವಿಶಾರದ ಶ್ರೀ ಬಿ. ದೇವೇಂದ್ರಪ್ಪನವರ ಸಂಗೀತ ಏರ್ಪಾಟಾಗಿತ್ತು.

ಶ್ರೀ ಧರ್ಮವೀರರು ಭಾಷಣ ಮಾಡುತ್ತಾ : ರಾಷ್ಟ್ರದ ಜನರು ಅಶಿಸ್ತು, ಸಂಶಯ ಮನೋಭಾವ ಮತ್ತು ದ್ವೇಷಾಸೂಯೆಗಳನ್ನು ಮರೆಯಬೇಕು. ಗಾಂಧಿಯವರ ಇಚ್ಛೆ ಆದ ಸೇವಾತತ್ಪರತೆ, ಶಾಂತಿ ಸಾಧನೆ ಇವುಗಳಿಗಾಗಿ ಸರ್ವ ತ್ಯಾಗಕ್ಕೆ ಸಿದ್ಧರಾಗಬೇಕು. ಹಿಂದಿಗಿಂತ ಈಗ ಈ ಕ್ರಮ ಅಗತ್ಯ. ನಮ್ಮಲ್ಲಿ ಅವನತಿ ಪಡೆಯುತ್ತಿರುವ ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಈ ಮೂಲಕ ಪಡೆಯಬೇಕು ಎಂದರು.

ಸಂಘದ ಕಾರ್ಯದರ್ಶಿ ಡಾ. ಬಿ. ಜಿ. ದಾಸ್‌ರವರು ವಂದನಾರ್ಪಣೆ ಮಾಡಿದರು.

ವಾರ್ತಾವಿಶೇಷಗಳು

ರಾಜಾಸ್ತಾನದಲ್ಲಿ ಫ್ಲೂ ರೋಗದಿಂದ ನೂರತೊಂಬತ್ತೆಂಟು ಜನರು ಮರಣ ಹೊಂದಿದ್ದಾರೆ.

✱

ಮೈಸೂರು ರಾಜ್ಯ ಸರ್ಕಾರ ಪ್ರತಿ ತಿಂಗಳನಲ್ಲೂ ಲಾಟರಿ ನಡೆಸುವ ಯೋಜನೆ ಕೈಗೊಂಡಿದೆ.

ಮಂತ್ರಿಗಳಿಗೆ ಕರೆ

ಮುಂದಿನ ಐದಾರು ದಿನಗಳಲ್ಲಿ ದೆಹಲಿಯಲ್ಲಿ ಇರುವಂತೆ ತಮ್ಮ ಸಹೋದ್ಯೋಗಿಗಳಿಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಕರೆನೀಡಿದ್ದಾರೆಂದು ದೆಹಲಿ ವಾರ್ತೆ ತಿಳಿಸುತ್ತದೆ. ಹಾಗೆ ಮಾಡುವದರಿಂದ ಕೆಲವು ನೀತಿ ವಿಷಯಗಳನ್ನು ಕುರಿತು ಶೀಘ್ರ ನಿರ್ಧಾರ ತೆಗೆದುಕೊಳ್ಳುವ ಉದ್ದೇಶವಿದೆ.

ಈ ತಿಂಗಳು 19 ನೇ ತಾ. ಪ್ರಧಾನರು ತಾಶ್ಕೆಂಟಿಗೆ ತೆರಳುವ ಮೊದಲು ರಾಜಧನ ಮತ್ತು ಚಂಡೀಘರ ಭವಿಷ್ಯ ಕುರಿತು ನಿರ್ಧಾರ ಮಾಡಬೇಕೆಂಬ ಅಪೇಕ್ಷೆ ಇದೆ.

★

ಖಂಡನೆ

ಅಲ್ಪ ಸಂಖ್ಯಾತರನ್ನು ಭಾರತೀಕರಣ ಮಾಡಬೇಕೆಂಬ ಕೂಗನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ವಾರಣಾಸಿಯಲ್ಲಿ ಖಂಡಿಸಿದರು.

★

ಭಾರತಕ್ಕೆ ನೆದರ್ಲಾಂಡ್ ಸಾಲ

ನವದೆಹಲಿ— ಭಾರತವು ತನ್ನ ಅಭಿವೃದ್ಧಿ ಯೋಜನೆಗಳಿಗಾಗಿ ನೆದರ್ಲ್ಯಾಂಡ್ ರೂ 8 4 ಕೋಟಿ ಸಾಲ ಪಡೆಯುವ ಒಪ್ಪಂದಕ್ಕೆ ರುಜುವಾಗಿದೆ.

ಪ್ರಯತ್ನಗಳು

ಬಿಹಾರಿನಲ್ಲಿ ಕಮ್ಯೂನಿಸ್ಟ ಪಕ್ಷದ ಸಹಕಾರದೊಡನೆ ಸರ್ಕಾರ ರಚನೆ ಮಾಡಲು ಇಂದಿರಾ ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಸಂಯುಕ್ತ ಸಮಾಜವಾದಿಪಕ್ಷಕ್ಕೆ ಮಂತ್ರಿಮಂಡಲ ರಚಿಸಲು ವಿರೋಧ ಕಾಂಗ್ರೆಸ್ ಪಕ್ಷ ಪ್ರಯತ್ನಿಸುತ್ತಿದೆ.

●

ಮುಷ್ಕರ

ಒಂದೂವರೆ ಲಕ್ಷ ಮಕ್ಕಳಿಗೆ ಪಾಠ ನಡೆಸುವ ಮುನ್ನೂರಐವತ್ತುನಾಲ್ಕು ಶಾಲೆಗಳ ಒಂದೂವರೆ ಸಾವಿರ ಉಪಾಧ್ಯಾಯರ ಮುಷ್ಕರ ಲಂಡನ್ ಮತ್ತು ವೇಲ್ಸ್‌ನಲ್ಲಿ ಆರಂಭವಾಗಿದೆ.

○

ಗಡಿ ಮಾತುಕತೆ

ಚೀನಾ ರಷ್ಯ ಗಡಿ ಮಾತುಕತೆ ಪೀಕಿಂಗಿನಲ್ಲಿ ಆರಂಭವಾಯಿತು.

○

ವಿದ್ಯಾರ್ಥಿಯ ಮರಣ

ರಾಜಸ್ತಾನದಲ್ಲಿ ಆದ ಗಲಭೆಯಲ್ಲಿ ಅನಧಿಕೃತವಾಗಿ ಪೋಲೀಸನೋರ್ವ ಹಾರಿಸಿದ ಗುಂಡಿನಿಂದ ಓರ್ವ ಕಾಲೇಜು ವಿದ್ಯಾರ್ಥಿ ಸತ್ತನು. ಈ ಘಟನೆ ಆದುದು ಜಯ್ಪುರದಲ್ಲಿ. ಪೋಲೀಸನ ಸಸ್ಪೆಂಡಾಗಿದೆ.

ಶ್ರೀ ರಾಮಚಂದ್ರ ಸ್ವಾಮಿಯಲ್ಲಿ ನಾಯಿಯು ಮನವಿ

ಇದೊಂದು ರಾಮಾಯಣದಲ್ಲಿನ ಕಥೆ. ರಾಜ-ಶ್ರೀ ರಾಮಚಂದ್ರ ದರ್ಬಾರು ನಡೆಸುತ್ತಿದ್ದ. ಎಲ್ಲರ ದೂರು ವೃತ್ತಿತರ ವಿಷಯಗಳ ಕಡೆ ಗಮನ ಕೊಡುತ್ತಿದ್ದ ನು. ಒಂದು ದಿನ ಹೀಗೆ ನೆರೆದಿರಿಸಿದ ನಂತರ ಏಳಲಿದ್ದನು. ಆಗ, ಮತ್ಯಾರೂ ದೂರು ಕೊಡುವವರಿಲ್ಲವೇ ನೋಡು ಎಂದು ಲಕ್ಷ್ಮಣನಿಗೆ ತಿಳಿಸಿದನು. ಲಕ್ಷ್ಮಣ ನು ಅತ್ತ ಇತ್ತ ನೋಡಿ, ಯಾರೂ ಇಲ್ಲವೆಂದು ಹೇಳಿದನು. ಲಕ್ಷ್ಮಣ ದಯವಿಟ್ಟು ಹೊರಗೆ ನೋಡು, ಯಾರಾದರೂ ಇರಬಹುದು ಎಂದು ಪುನಃ ಶ್ರೀ ರಾಮನು ಹೇಳಿ ನು. ಲಕ್ಷ್ಮಣನು ಹೊರಗೆ ಬಂದು ನೋಡಲು, ಒಂದು ವ್ಯಸನಾಕ್ರಾಂತ ನಾಯಿ ಯು ನೋಡಿದ್ದನ್ನು ಕಂಡು, ಆ ವಿಷಯವನ್ನು ಶ್ರೀ ರಾಮನಿಗೆ ತಿಳಿಸಿದಾಗ, ನಾಯಿ ಯನ್ನು ಕರೆತರುವಂತೆ ಅವನು ಹೇಳಿದನು.

ನಾಯಿಯನ್ನು ಒಳಗೆ ಕರತರಲಾಯಿತು. ಶ್ರೀ ರಾಮನನ್ನು ಕುರಿತು, ನಿನ ಗೇನು ವ್ಯಸನ ಎಂದು ಕೇಳಿದನು. ನಾಯಿಯು ಉತ್ತರಿಸಿತು– ' ನಾನು ರಸ್ತೆಯಲ್ಲಿ ಮಲಗಿದ್ದೆ, ದೃಷ್ಟವಾಗಿರಲಿಲ್ಲ ; ಆಗ ಈ ದರ್ಬಾರ್‌ನಿಂದ ಬಂದ ಒಬ್ಬ ಬ್ರಾಹ್ಮಣನು ನಾನು ರಸ್ತೆಯಲ್ಲಿ ಮಲಗಿದ್ದದು ಅವನಿಗೆ ಹೋಗಲು ಅಡ್ಡಿಯಾಯಿತೆಂದು ನನ್ನನ್ನು ಕೊಡೆದನು ; ನಾನು ಅಡ್ಡಿ ಮಾಡಲಿಲ್ಲ, ಎಂದು ಹೇಳಿತು.

ಶ್ರೀ ರಾಮಚಂದ್ರನು ಬ್ರಾಹ್ಮಣನನ್ನು ಕರೆಸಿ, ಯಾಕೆ ಇದನ್ನು ಹೊಡೆದ ಎಂದು ಕೇಳಿದನು.

ನಾನು ಒಹಳ ಆತುರದಲ್ಲಿದ್ದೆ, ನಾಯಿ ರಸ್ತೆಯಿಂದ ಏಳಲಿಲ್ಲ, ಆದಕ್ಕಾಗಿ ಹೊಡೆದೆ, ಎಂದು ಬ್ರಾಹ್ಮಣನು ಹೇಳಿದನು

ಶ್ರೀ ರಾಮನು ನಾಯಿಯ ಕಡೆ ತಿರುಗಿ, ' ಬ್ರಾಹ್ಮಣ ತನ್ನ ಅಪರಾಧ ಒಪ್ಪಿ ಕೊಂಡಿದ್ದಾನೆ ; ಇವನಿಗೆ ಏನು ಶಿಕ್ಷೆ ಕೊಡಬೇಕೆಂದು ನಿನ್ನ ಇಚ್ಛೆ ' ಎಂದು ಕೇಳಿದನು.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲು
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಟ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI
SUDHA
A Superb Tonic

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಅಮೋಘ 2ನೇ ವಾರ
ಶಿ ನ್ ಅಮೋಘ ಪ್ರಾರಂಭ
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ
ಗೆಜ್ಜೆಪೂಜೆ
ನಟವರ್ಗ– ಕಲ್ಪನ, ಆಶ್ವಥ್, ಬಾಲಕೃಷ್ಣ, ಪಂಡರಿಬಾಯಿ
ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್
[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 3ನೇ ವಾರ
.... ಅತ್ಯಮೋಘ ಹಿಂದಿ ಚಿತ್ರ ....
ನನ್ನ ಪರಿಷ್ಟ
ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore